ಸದರಿ ಕಾಮಗಾರಿಗಳು 1-6-2002 ರಿಂದ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವುದರಿಂದ ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯವರಿಗೆ ಪ್ರಸ್ತಾವನೆಯನ್ನು ಈಗಾಗಲೇ ಕಳುಹಿಸಿ ಕೊಟ್ಟಿರುವುದರಿಂದ, ಅವರು ಮುಂದಿನ ಕ್ರಮ ತೆಗೆದು ಕೊಳ್ಳುವರು.

ಈ) ಕೊಡಗು ಜಿಲ್ಲೆಗೆ ಆರ್.ಇ.ಪಿ.ಯಲ್ಲಿ ರೂ. 3081.39 ಲಕ್ಷಗಳು ಮಂಜೂರಾತಿಯಾಗಿದೆ.

ಉ) ತಾಲ್ಲೂಕು	ಗುರುತಿಸಲಾಗಿದ್ದ ಹ್ಯಾಮ್ಲೆಟ್ ಹರಿಜನ ಬಸ್ತಿ: ಜನತಾ ಕಾಲೋನಿ: ಸಂಖ್ಯೆ
1. ಮಡಿಕೇರಿ	31
2. ವಿರಾಜಪೇಟೆ	29
3. ಸೋಮವಾರಪೇಟೆ	63
ಒಟ್ಟು	123

ಊ) ಇನ್ನೂ ವಿದ್ಯುದ್ದೀಕರಣವಾಗದೇ ಇರುವ ಹ್ಯಾಮ್ಲೆಟ್: ಹರಿಜನ ಬಸ್ತಿ: ಜನತಾ ಕಾಲೋಜನಿಗಳ ವಿದ್ಯುದ್ದೀಕರಣ ಸಂಬಂಧ, ಯೋಜನೆ ವರದಿಯನ್ನು ತಯಾರಿಸಿ, ಆರ್.ಇ.ಪಿ. ನವದೆಹಲಿಯಿಂದ ಸಾಲ ಮಂಜೂರಾತಿ ಪಡೆದು ಮೇಲೆ ತಿಳಿಸಿದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಜಸರ್ಕಾರ ಖಾತ್ರಿ ಪಡೆದು ವಿದ್ಯೂದೀಕರಣ ಕಾರ್ಯಗಳನ್ನು ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯವರು ಕೈಗೆತ್ತಿಕೊಳ್ಳಬಹುದು.

ಸೋಮವಾರ ಪೇಟೆ ಪಟ್ಟಣ ಪಂಚಾಯ್ತಿಯ ನೀರು ಮತ್ತು ಚರಂಡಿ ವ್ಯವಸ್ಥೆ

5(8) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೊಡಗು ಜಿಲ್ಲೆ ಸೋಮವಾರ ಪೇಟೆ ಪಟ್ಟಣ ಪಂಚಾಯಿತಿಯ ಅಭಿವೃದ್ಧಿ ಹಾಗೂ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿಗಾಗಿ (ಸಂಪೂರ್ಣ ವ್ಯವಸ್ಥೆಗಾಗಿ) ಹಮ್ಮಿಕೊಂಡಿರುವ ಯೋಜನೆಗಳು ಯಾವ ಹಂತದಲ್ಲಿವೆ.

2. ಸದರಿ ಯೋಜನೆಯು ಕುಂಟುತ್ತ ಸಾಗಲು ಕಾರಣವೇನು?

3. ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುತ್ತದೆ. ವಿವರ ನೀಡುವುದು.

4. ಇದಕ್ಕಾಗಿ ಇದುವರೆಗೆ ಖರ್ಚಾಗಿರುವ ಹಣವೆಷ್ಟು? ಎಷ್ಟು ಹಣ ಮಂಜೂರಾಗಿದೆ? ಯಾವಾಗ ಪೂರ್ಣಗೊಳಿಸಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

1. ಹಾರಂಗಿ ಜಲಾಶಯ ಮೂಲದಿಂದ ಸೋಮವಾರ ಪೇಟೆ ಪಟ್ಟಣಕ್ಕೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಸೇರಿ ನೀರು ಸರಬರಾಜು ಯೋಜನೆಯ ಯೋಜನಾ ಸಾಧ್ಯತಾ ವರದಿಯನ್ನು ರೂ. 532.00 ಲಕ್ಷಗಳಿಗೆ ತಯಾರಿಸಿದ್ದು ಮಂಡಲಿಯಲ್ಲಿ ಪರಿಶೀಲನೆ ಹಂತದಲ್ಲಿರುತ್ತದೆ. ಪ್ರಸ್ತುತ ಒಳಚರಂಡಿಗಾಗಿ ಯಾವುದೇ ಪ್ರಸ್ತಾವನೆ ಮಾಡಿರುವುದಿಲ್ಲ.

2. ಆರ್.ಡಿ.ಪಿ.ಆರ್. ಇಲಾಖೆಯಿಂದ ಒಪ್ಪಿಗೆ ಹಾಗೂ ಫ್ರೊರೇಟಾ ಭಾಗದ ಹಣ ಸಂದಾಯವಾಗಿರುವುದಿಲ್ಲರುವುದೇ ಮುಖ್ಯ ಕಾರಣಗಳು.

3. ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಲು ಪರಿಶೀಲಿಸುತ್ತಿದೆ.

4. ಉದ್ಭವಿಸುವುದಿಲ್ಲ.

ರಾಜ್ಯದ ವಿವಿಧ ಮಾದರಿಯ 15 ವರ್ಷಗಳ ಹಳೆಯ ವಾಹನಗಳನ್ನು ಹಿಂದಕ್ಕೆ ಪಡೆಯುವುದು.

8(62) -ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಮಾದರಿಯ ವಾಹನಗಳನ್ನು ಬಳಸಲು ಕಾಲಮಿತಿ ನಿಗಧಿಗೊಳಿಸಲಾಗಿದೆಯೆ?

ಆ) ಆ ನಿಟ್ಟಿನಲ್ಲಿ 15 ವರ್ಷ ದಾಟಿದ ವಾಹನಗಳನ್ನು ಹಿಂದಕ್ಕೆ ಪಡೆಯಲು ಸರ್ಕಾರ ನಿರ್ಧರಿಸಿರುವುದು ನಿಜವೇ?

ಇ) ಈ ಕ್ರಮದ ಅವಶ್ಯಕತೆ ನೀಡುವುದು ಹಾಗೂ ಯಾವ ಮಾನದಂಡದ ಆಧಾರದಲ್ಲಿ (ಅಳತೆಗೋಲು) ವಾಹನಗಳನ್ನು ಹಿಂದಕ್ಕೆ ಪಡೆಯಲು ಯೋಚಿಸಲಾಗಿದೆ?

ಈ) ವಾಹನಗಳನ್ನು ಹಿಂದಕ್ಕೆ ಪಡೆಯಲು ಕಾಲಮಿತಿ ಯೋಜನೆಗಳನ್ನು ಅನುಸರಿಸಲಾಗುತ್ತಿದೆಯೇ?

ಉ) 15 ವರ್ಷ ಬಳಕೆ ಮಾಡಿದ ನಂತರ ಹಿಂದಕ್ಕೆ ಪಡೆದ ವಾಹನಗಳನ್ನು ಏನು ಮಾಡಲಾಗುತ್ತದೆ?

ಊ) ಈ ರೀತಿ ಮಾಡುವುದರಿಂದ ಸರ್ಕಾರದ ಅಧೀನದಲ್ಲಿರುವ ಎಷ್ಟು ವಾಹನಗಳು ಸಂಚಾರಕ್ಕೆ ಉಪಯುಕ್ತವಲ್ಲವೆಂದು ಪರಿಗಣಿಸಲಾಗುತ್ತಿದೆಯೇ?

ಶ್ರೀ ರಾಮಾನಾಥ ರೈ.ಬಿ. (ಸಾರಿಗೆ ಸಚಿವರು)

ಅ) ಇಲ್ಲ